ಓ.ಎಸ್. ನಂ. 14/2021 ಪಿ.ಡಬ್ಲೂಃ 1

ದಿನಾಂಕಃ 30.08.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು

ಮುಂದುವರೆದ ಪಾಟೀಸವಾಲು ಶ್ರೀ. ಎಸ್.ಹೆಚ್.ಎಂ. ವಕೀಲರಿಂದ :–

ಕಳೆದ ಬಾರಿ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿದಿರುವುದು ನನಗೆ ನೆನಪಿರುತ್ತದೆ. ನಮ್ಮ ಕುಟುಂಬದ ಮೂಲ ವಂಶಸ್ಥರಾದ ಹೋರಿಗೌಡರ ತಂದೆಯ ಹೆಸರು ಮೇರೆಗೌಡ. ಮೂಲ ವಂಶಸ್ಥರಿಗೆ ಎಷ್ಟು ಆಸ್ತಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಕಾರಣ ಏನೆಂದರೆ ನನ್ನ ಅಣ್ಣ ಆಸ್ತಿಯನ್ನು ನೋಡಿಕೊಳ್ಳುತ್ತಿದ್ದ ಕಾರಣ ನನಗೆ ಗೊತ್ತಿರುವುದಿಲ್ಲ. ಹೋರಿಗೌಡರು ಯಾವುದಾದರೂ ಸ್ವತ್ತನ್ನು ಕ್ರಯಕ್ಕೆ ಪಡೆದಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ . ನನ್ನ ತಂದೆಯವರು 15/2 ರಲ್ಲಿ 33 ಗುಂಟೆ ಆಸ್ತಿಯನ್ನು ಖರೀದಿ ಮಾಡಿದ್ದರು. ನಾನು ಬೇಡಿಗನಹಳ್ಳಿ ವಾಸಿಯಾಗಿದ್ದೇನೆ. ಅಲ್ಲಿಂದ ಸೀಬಹಳ್ಳಿ ಗ್ರಾಮದಿಂದ ಬೇಡಿಗನಹಳ್ಳಿ ಗ್ರಾಮ ಎರಡು ಕಿಮೀ ದೂರದಲ್ಲಿರುತ್ತದೆ. ಹಾನಗಲ್ ಸಹಾ ಒಂದೂವರೆ ಎರಡು ಕಿಮೀ ದೂರದಲ್ಲಿರುತ್ತದೆ. ನಮ್ಮ ಮನೆಯಿಂದ ಸದರಿ ಗ್ರಾಮವು ದೂರವಿರುತ್ತದೆ. ತಿಮ್ಮ ಬಿನ್ ತಿಮ್ಮರಾಯ ಯಾರೆಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನು ಈ ಪ್ರಕರಣದಲ್ಲಿ ನಾನು ಸೇರಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ನನ್ನ ಹಿರಿಯ ಅಣ್ಣ ಹೆಸರಿನಲ್ಲಿ ಖಾತೆ ಇರುವ ಸ್ವತ್ತನ್ನು ಸೇರಿಸಿರುವುದಾಗಿ ಉತ್ತರಿಸುತ್ತಾರೆ. ಮೇಲೆ ಹೇಳಿದಂತಹ ಸೀಬಹಳ್ಳಿ ಗ್ರಾಮದ ಸ.ನಂ. 28/1 ನ್ನು ನಾನು ಅನುಭವ ಮಾಡುತ್ತಿಲ್ಲ. ಯಾರು ಅನುಭವ ಮಾಡುತ್ತಿದ್ದಾರೆಂದು ನನಗೆ ಹೇಳಲು ಆಗುವುದಿಲ್ಲ. ಸ.ನಂ. 20/1 ರ 29 ಗುಂಟೆ ಹಾನಗಲ್ ಗ್ರಾಮದಲ್ಲಿದ್ದು, ಸದರಿ ಸ್ವತ್ತನ್ನು ಈ ಪ್ರಕರಣದಲ್ಲಿ ಸೇರಿಸಿರುವುದಿಲ್ಲ ಎಂದರೆ ಹೌದು. ಸಾಕ್ಷಿ ಮುಂದುವರೆದು ನನ್ನ

ಅಣ್ಣ ಹಾಗೂ ತಂದೆಯ ಹೆಸರಿನಲ್ಲಿ ಇಲ್ಲದ ಕಾರಣ ಸದರಿ ಸ್ವತ್ತನ್ನು ಈ ಪ್ರಕರಣದಲ್ಲಿ ಸೇರಿಸಿರಿವುದಿಲ್ಲ ಎಂದು ಉತ್ತರಿಸುತ್ತಾರೆ. ಮೇಲೆ ಹೇಳಿದಂತಹ ಸ್ವತ್ತು ಪಿತ್ರಾರ್ಜಿತ ಆಸ್ತಿ ಎಂದರೆ ಹೌದು. ಸದರಿ ಸ್ವತ್ತಿನಲ್ಲಿ ನನಗೂ ಹಾಗೂ ಪ್ರತಿವಾದಿಗಳಿಗೆ ಪಾಲು ಬರಬೇಕು ಎಂದರೆ ಹೌದು. ಸದರಿ ಸ್ವತ್ತನ್ನು ಈ ಪ್ರರಕಣದಲ್ಲಿ ಸೇರಿಸಲು ತೊಂದರೆ ಏನಿತ್ತು ಎಂದು ಕೇಳಲಾಗಿ ಸಾಕ್ಷಿಯು ನನ್ನ ಹಿರಿಯ ಅಣ್ಣನ ಹೆಸರಿನಲ್ಲಿ ಹಾಗೂ ತಂದೆಯ ಹೆಸರಿನಲ್ಲಿ ದಾಖಲಾತಿ ಇಲ್ಲದ ಕಾರಣ ಸೇರಿಸಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಸ.ನಂ. 20/1 ಹೋರಿಗೇಗೌಡ ಬಿನ್ ಮೇರೇಗೌಡ ಎಂಬುವವರ ಹೆಸರಿನಲ್ಲಿರುತ್ತದೆ. ಸದರಿ ಸಂಗತಿಯನ್ನು ಸಾಕ್ಷಿಯು ಪ್ರತಿವಾದ ಪರ ವಕೀಲರು ತೋರಿಸಿದ ಆಧಾರದ ಮೇಲೆ ನ್ಯಾಯಆಲಯದಲ್ಲಿ ಸಾಕ್ಷಿ ನುಡಿದಿರುತ್ತಾರೆ. ಹೋರಿಗೌಡ ನನ್ನ ತಾತನಾಗಬೇಕು. ಹೋರಿಗೌಡರ ಅಣ್ಣತಮ್ಮಂದಿರು ಇಬ್ಬರೆಂದು ಹೇಳುತ್ತಾರೆ ನನಗೆ ಸರಿಯಾಗಿ ಗೊತ್ತಿಲ್ಲ. ಹೋರಿಗೌಡರ ಅಣ್ಣತಮ್ಮಂದಿರು ಈಗ ಜೀವಂತ ಇರುವುದಿಲ್ಲ. ಹೋರಿಗೌಡರ ಹೆಸರಿನಲ್ಲಿನ ಆಸ್ತಿಯಲ್ಲಿ ಪ್ರತಿವಾದಿಗಳಿಗೆ ಹಿಸ್ಸೆ ಹಕ್ಕು ಇರುತ್ತದೆ ಎಂದರೆ ಹೌದು.

ಈ ಮೊದಲು ನನ್ನ ಚಿಕ್ಕಪ್ಪನ ಮಕ್ಕಳು ನ್ಯಾಯಾಲಯದಲ್ಲಿ ವಿಭಾಗದ ದಾವೆಯನ್ನು ಹೂಡಿದ್ದರು. ದಾವಾ ಸಂಖ್ಯೆ ಗೊತ್ತಿಲ್ಲ. ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ನಡೆದಿರುತ್ತದೆ. ಸದರಿ ಪ್ರಕರಣದಲ್ಲಿ ನಾನು ಹಾಗೂ ನನ್ನ ಅಣ್ಣ ಪಕ್ಷಗಾರರಾಗಿದ್ದೆವು. ನಾನು ಸದರಿ ದಾವೆಯಲ್ಲಿ ಎರಡನೇ ಪ್ರತಿವಾದಿ ಎಂದರೆ ಹೌದು. ಪಾಪೇಗೌಡರವರು ಸದರಿ ದಾವೆಯನ್ನು ಹೂಡಿದ್ದರು. ಸದರಿ ದಾವೆಯಲ್ಲಿ ನಾನು ವಿಚಾರಣೆಯನ್ನು ನೀಡಿರುತ್ತೇನೆ ಎಂದರೆ ಹೌದು. ಈ ಮೊದಲು ನಡೆದಂತಹ ದಾವೆಯಲ್ಲಿ ವಿಚಾರಗಳನ್ನು ನಾನು ಈಗ ಸಲ್ಲಿಸಿರುವ ವಾದ ಪತ್ರದಲ್ಲಿ ಹೇಳಿರುವುದಿಲ್ಲ. ಸದರಿ ಸ್ವತ್ತಿನಲ್ಲಿ ಯಾವ ಯಾವ ಸ್ವತ್ತುಗಳು ಸೇರಿತ್ತು ಎಂದು ಹೇಳಲು

ಆಗುವುದಿಲ್ಲ. ಸ.ನಂ. 17/1 ತಿಮ್ಮಪ್ಪಗೌಡರ ಆಸ್ತಿಯಾಗಿತ್ತು. ನನ್ನ ತಂದೆ 1989 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಾಯಿ 30 ವರ್ಷದ ಹಿಂದೆ ಮೃತಪಟ್ಟಿದ್ದರು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ ಮೃತಪಟ್ಟಾಗ ನನಗೆ 32 ವರ್ಷ ವಯಸ್ಸಾಗಿತ್ತು. ನನ್ನ ತಂದೆ ಮೃತಪಟ್ಟಾಗ ನನಗೆ ಮದುವೆಯಾಗಿತ್ತು. ನನ್ನ ತಂದೆ ಜೀವಂತವಿದ್ದಾಗ ನಾನು ಬೇರೆ ಇದ್ದೆ ಎಂದರೆ ಸರಿಯಲ್ಲ. ಮೃತಪಟ್ಟ ನಂತರ ಬೇರೆಯಾಗಿರುತ್ತೇನೆ. ನಾವು 2018 ನೇ ಸಾಲಿನವರೆಗೂ ಒಟ್ಟಿಗೆ ಇದ್ದೆವು. ಈ ಹಂತದಲ್ಲಿ ಸಾಕ್ಷಿಗೆ ಒಂದು ಪಡಿತರ ಚೀಟಿಯನ್ನು ತೋರಿಸಿ 2013 ನೇ ಸಾಲಿನಲ್ಲಿ ನೀವು ನಿಮ್ಮ ಅಣ್ಣನೊಂದಿಗೆ ಇದ್ದೀರ ಎಂದು ಕೇಳಲಾಗಿ ಸಾಕ್ಷಿಯು ತನ್ನ ಅಣ್ಣ ಮನೆ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದು, ಪಡಿತರ ಚೀಟಿಯಲ್ಲಿ ನನ್ನ ಹೆಸರನ್ನು ಸೇರಿಸಿದ್ದರೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಾನು ನನ್ನ ಅಣ್ಣನೊಟ್ಟಿಗೆ ಒಟ್ಟು ಕುಟುಂಬದಲ್ಲಿ ವಾಸ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಪ್ರತ್ಯೇಕವಾಗಿ ವಾಸ ಇದ್ದೆ ಎಂದರೆ ಸರಿಯಲ್ಲ. ನನ್ನ ಅಣ್ಣನ ಮಕ್ಕಳಿಗೆ ಮೋಸ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೊದಲು ಆದಂತಹ ತೀರ್ಮಾನದಂತೆ ಅಂತಿಮ ಡಿಕ್ರಿ ಪ್ರಕರಣ ಚಾಲ್ತಿಯಲ್ಲಿದೆ ಎಂದರೆ ಸಾಕ್ಷಿಯು ತನ್ನ ಚಿಕ್ಕಪ್ಪನ ಮಗ ನನಗೆ ಹೇಳಿರುತ್ತಾರೆ ಎಂದು ಉತ್ತರಿಸುತ್ತಾರೆ. ನಾನು ನನ್ನ ಅಣ್ಣ ಹಾಗೂ ಚಿಕ್ಕಪ್ಪನ ಮಕ್ಕಳು ಕುಟುಂಬದಲ್ಲಿ ವಿಭಾಗ ಪತ್ರವನ್ನು ಮಾಡಿಕೊಂಡಿರುವುದಿಲ್ಲ . ನನ್ನ ಚಿಕ್ಕಪ್ಪನ ಮಕ್ಕಳನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

(ಅಮರ್ ವಿ.ಎಲ್.)

ಸೀನಿಯರ್ ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ ಹೊಳೆನರಸೀಪುರ